**Vijaya Karnataka (Namma Mysooru)**

**Date:** Wednesday, June 25, 2014 **Page No.**03

**Edition:** Mysore **Language:** Kannada

# ಸರಕಾರಿ ಶಾಲೆಗೆ ಲೇಖನ ಸಾಮಗ್ರಿ ವಿತರಣೆ

**ವಿಕ ಸುದ್ದಿಲೋಕ** ಮೈಸೂರು

ನಗರದ ಜಾಕಿ ಕ್ವಾಟ್ರಸ್‌ನ ಬಾಡಿಗಾರ್ಡ್ ಲೈನ್‌ನಲ್ಲಿರುವ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ 150 ವಿದ್ಯಾರ್ಥಿಗಳಿಗೆ ಎಸ್‌ಡಿಎಂಐಎಂಡಿ ಸಂಸ್ಥೆಯ ವಿದ್ಯಾರ್ಥಿಗಳು ಸೋಮವಾರ ಲೇಖನ ಸಾಮಗ್ರಿ ವಿತರಿಸಿದರು.

ಕಂಪೆನಿಗಳ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ಕಾರ್ಯಕ್ರಮದಡಿ, ಶಾಲೆಯ 1ರಿಂದ 7ನೇ ತರಗತಿಯ ಮಕ್ಕಳಿಗೆ ನೋಟ್ ಪುಸ್ತಕಗಳು, ಜಾಮಿಟ್ರಿ ಬಾಕ್ಸ್ ಹಾಗೂ ಬಣ್ಣದ ಪೆನ್ಸಿಲ್‌ಗಳನ್ನು ವಿತರಿಸಲಾಯಿತು. ಕಳೆದ ವರ್ಷ ಇದೇ ಸಂಸ್ಥೆ ವತಿಯಿಂದ 4ರಿಂದ 7ನೇ ತರಗತಿ ವಿದ್ಯಾರ್ಥಿಗಳಿಗೆ ರೀಡಿಂಗ್ ಟೇಬಲ್, ಕ್ರೀಡಾ ಸಾಮಗ್ರಿ ಹಾಗೂ ಬ್ಯಾಂಡ್‌ಸೆಟ್ ವಿತರಿಸಲಾಗಿತ್ತು.

''ಕಳೆದೆರಡು ವರ್ಷಗಳಿಂದ ಶಾಲೆಗೆ ವಿವಿಧ ಸಾಮಗ್ರಿಗಳನ್ನು ವಿತರಿಸಲಾಗುತ್ತಿದೆ. ಸಾಮಾಜಿಕ ಚಟುವಟಿಕೆಯ ಭಾಗವಾಗಿ ಈ ಕಾರ್ಯ ಮಾಡಲಾಗುತ್ತಿದೆ'' ಎಂದು ಎಸ್‌ಡಿಎಂಐಎಂಡಿಯ ವ್ಯವಸ್ಥಾಪಕ (ಅಡ್ಮಿನಿಸ್ಟ್ರೇಷನ್) ಸಿ.ವಿ. ಶ್ರೀಧರ್ ತಿಳಿಸಿದರು.

ಶಾಲೆ ಮುಖ್ಯೋಪಾಧ್ಯಾಯ ಜೆ.ಜವರೇಗೌಡ ಹಾಗೂ ಶಿಕ್ಷಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಮೈಸೂರಿನ ಜಾಕಿ ಕ್ವಾಟ್ರಸ್‌ನ ಬಾಡಿಗಾರ್ಡ್ ಲೈನ್‌ನಲ್ಲಿರುವ ಸರಕಾರಿ ಶಾಲೆಯ ಮಕ್ಕಳಿಗೆ ಎಸ್‌ಡಿಎಂಐಎಂಡಿ ವಿದ್ಯಾರ್ಥಿಗಳು ಲೇಖನ ಸಾಮಗ್ರಿ ವಿತರಿಸಿದರು.